# MALE MAHADESHWARA KAVYADALLI MAHILA PRATHINIDHIKARANA

DR. CHANDRAVATHI SHETTY
ASSOCIATE PROFESSOR
KANNADA DEPARTMENT
SRI SHARADA COLLEGE, BASRUR – 576211, KUNDAPURA TALUK, UDUPI DISTRICT, KARNATAKA, INDIA.

***Abstract:*** This study has been undertaken to investigate the determinants of stock returns in Karachi Stock Exchange (KSE) using two assets pricing models the classical Capital Asset Pricing Model and Arbitrage Pricing Theory model. To test the CAPM market return is used and macroeconomic variables are used to test the APT. The macroeconomic variables include inflation, oil prices, interest rate and exchange rate. For the very purpose monthly time series data has been arranged from Jan 2010 to Dec 2014. The analytical framework contains**.**

***Index Terms* - Component,formatting,style,styling,insert.**

## I. INTRODUCTION

ಜನಪದ ಸಂಸ್ಕೃತಿಯ ಅಭಿವ್ಯಕ್ತಿ ಪ್ರಕಾರಗಳಲ್ಲಿ ಜನಪದ ಸಾಹಿತ್ಯ ಬಹುಮುಖ್ಯವಾದದ್ದು. ಜಗತ್ತಿನ ಬಹುತೇಕ ಎಲ್ಲ ಅನಕ್ಷರಸ್ಥ ಜನ ಸಮುದಾಯಗಳ ಹಾಗೂ ಶೋಷಿತ ಜನರ ಅನಿಸಿಕೆಗಳನ್ನು ಅಭಿವ್ಯಕ್ತಪಡಿಸುವುದಕ್ಕೆ ಇರುವ ಮಾಧ್ಯಮವೆಂದರೆ ಕಂಠಸ್ಥ ಸ್ವರೂಪದಲ್ಲಿ ಹರಿದು ಬರುವ ಜನಪದ ಸಾಹಿತ್ಯವೇ ಆಗಿದೆ. ಈ ಸಾಹಿತ್ಯದ ಸೃಷ್ಟಿಯಲ್ಲಿ ಪುರುಷರಂತೆಯೇ ಸ್ತ್ರೀಯರೂ ಸಹ ತಲೆತಲಾಂತರಗಳಿಂದ ಸಮಾನವಾಗಿ ಭಾಗವಹಿಸುತ್ತಾ ಬಂದಿದ್ದಾರೆ. ಅನರಕ್ಷತೆ ಮತ್ತು ಪುರುಷ ಪ್ರಧಾನ ಸಮಾಜದ ಪ್ರಾಬಲ್ಯದ ಕಾರಣವಾಗಿ ಬಹುತೇಕ ಹಿನ್ನೆಲೆಯಲ್ಲಿಯೇ ಉಳಿದ ಸ್ತ್ರೀ ಸಂವೇದನೆಗಳನ್ನು ತಿಳಿದುಕೊಳ್ಳಲು ಜನಪದ ಸಾಹಿತ್ಯ ವಿಶ್ವಾಸಾರ್ಹ ಮಾಹಿತಿಯ ಆಕರ ಮಹಿಳೆಯ ಮನೋಧರ್ಮ, ಕಷ್ಟ, ಸುಖ, ನೋವು, ನಲಿವು, ಆಸೆ, ಆಕಾಂಕ್ಷೆ, ಧ್ಯೇಯ, ಆದರ್ಶ, ಮುಂತಾದ ವಿಷಯವನ್ನು ತಿಳಿದುಕೊಳ್ಳಲು ತುಂಬಾ ಮಹತ್ವದ್ದು. ಬದುಕಿನಲ್ಲಿ ವಿಧವಿಧವಾದ ತೊಂದರೆಗಳಲ್ಲಿ ತೊಳಲಿದಂತವರು ಮನೆಯಿಂದ ಹೊರತಳ್ಳಲ್ಪಟ್ಟವರು, ಈ ರೀತಿಯ ಸಂಬಂಧದ ವಿವರಗಳನ್ನು ಒಳಗೊಂಡಿರುವ ಜನಪದ ಸಾಹಿತ್ಯವನ್ನು ಹೆಣ್ಣಿನ ಬಗ್ಗೆ ತಿಳಿಯುವುದಕ್ಕೆ ಇರುವ ಒಂದು ಉಪಯುಕ್ತ ಸಾಮಾಗ್ರಿ ಎಂದೇ ಹೇಳಬಹುದು.

ಜನಪದ ಮಹಿಳೆ ಪುರುಷ ನಿರ್ಮಿತ ವ್ಯವಸ್ಥೆಯನ್ನು ಪ್ರಬಲವಾಗಿ ಪ್ರತಿಭಟಿಸಿಲ್ಲವಾದರೂ ಅದರಿಂದಾಗಿ ತನ್ನ ಮೇಲಾಗುವ ಅನ್ಯಾಯದ ವಿರುದ್ಧ ಸಿಡಿಮಿಡಿಗೊಂಡಿದ್ದಾಳೆ ಕೆಲವೆಡೆ ಸಂಪೂರ್ಣವಾಗಿ ಪ್ರತಿಭಟಿಸಿ ಅಲ್ಲಿ ಪರ್ಯಾಯ ವ್ಯವಸ್ಥೆಯನ್ನು ಮೂಡಿಸುವ ತನ್ನ ಹಂಬಲವನ್ನು ವ್ಯಕ್ತಪಡಿಸಿದ್ದಾಳೆ. ಅಂತೆಯೇ ಮಲೆಮಹಾದೇಶ್ವರ ಜನಪದ ಮಹಾಕಾವ್ಯದಲ್ಲಿ ಮಹಾಸತಿ ಸಂಕಮ್ಮ, ದುಂಡಮ್ಮ, ಬೇವುನಟ್ಟೆ ಕಾಳಮ್ಮ, ದುರ್ಗದ ಮಲ್ಯಮ್ಮ ಹೀಗೆ ಮಹಿಳೆಯರ ಪ್ರತಿನಿಧೀಕರಣವನ್ನು ಕಾಣಬಹುದಾಗಿದೆ.

ನಮ್ಮ ಸುತ್ತಲಿನ ಸಮಾಜದಲ್ಲಿ ಗಂಡನ ಅನುಮಾನಗಳಿಗೆ ಶರಣಾದವರು, ಪಲಾಯನವಾದವರು, ಕ್ರೂರಿಗಳಾದವರು ಸಾಕಷ್ಟು ಸಿಗುತ್ತಾರೆ ಆದರೆ ಶರಣೆ ಸಂಕಮ್ಮ ಗಂಡನ ಅನುಮಾನಗಳಿಗೆ ಸೆಡ್ಡು ಹೊಡೆದು ನಿಂತ ಸಾಧ್ವಿ, ತನ್ನ ಶೀಲದ ಬಗ್ಗೆ, ತನ್ನ ವ್ಯಕ್ತಿತ್ವದ ಬಗ್ಗೆ ಎದುರಾದ ಎಲ್ಲಾ ನೋವುಗಳನ್ನು ಉಂಡಾಕೆ ಆ ಎಲ್ಲ ನೋವು ಸಂಕಟಗಳ ನಡುವೆಯೂ ಗಂಡನ ಪ್ರೀತಿ, ಸಂಬಂಧಗಳಿಗೆ ಪರಿತಪಿಸುವಾಕೆ, ಅಲ್ಲಿ ವಿಚ್ಛೇದನದ ಅಣುವೂ ಇಲ್ಲ ಎಲ್ಲ ನೋವು, ನಲಿವು, ಹೋರಾಟಗಳು ಅನಂತ ಅನುಬಂಧದ ಸಂಬಂಧಕ್ಕಾಗಿ ಎನ್ನುವ ಅತ್ಯಂತ ಸಂಕೀರ್ಣವಾದ ಆಧುನಿಕ ಅರಿವುಗಳನ್ನೆಲ್ಲ ಬೆಚ್ಚಿ ಬೀಳಿಸುವ ಭೋಗವ, ವಿಚ್ಛೇದನವಾದಿ ಸಂಶಯಗ್ರಸ್ಥ ಮನಸ್ಸುಗಳಿಗೆ ಶಸ್ತ್ರ ಚಿಕಿತ್ಸೆ ನೀಡುವ ಮಹಾಸ್ತ್ರೀ ಮಲೆಯ ಮಾದೇಶ್ವರದ ಸಂಕಮ್ಮ, ಸೀತೆಯ ಮುಗ್ಧತೆ, ದ್ರೌಪದಿಯ ಕಠೋರತೆಗಳೆರಡನ್ನು ಒಳಗೊಂಡಿದ್ದರೂ ಸಂಕಮ್ಮ, ಸೀತೆ ದ್ರೌಪದಿಯರಿಗಿಂತಲೂ ಭಿನ್ನವಾಗಿ ನಿಲ್ಲುವ ಮಹಾಗರತಿ.

ಮಲೆ ಮಾದೇಶ್ವರ ಮಹಾಕಾವ್ಯದಲ್ಲಿ ಸಂಕಮ್ಮನ ಕಥೆಯಷ್ಟು ಜನಪ್ರಿಯವಾದ ಕಥಾಭಾಗ ಬೇರೆ ಯಾವುದು ಇಲ್ಲವೆಂದೇ ಹೇಳಬಹುದು. ಹೋರಾಟದಿಂದ ಬದುಕು ಪಕ್ವಗೊಂಡು ರಸಪೂರ್ಣವಾಗುತ್ತದೆ. ಅದಕ್ಕೆ ಎದುರಾಗುವ ತೊಡರುಗಳೇ ಮಹಾಗುರುಗಳು ಎಂಬುದಕ್ಕೆ ಸಂಕಮ್ಮ ಒಂದು ಉದಾಹರಣೆ ಸಂಕಮ್ಮನನ್ನು ಮದುವೆಯಾದ ನೀಲಯ್ಯ ತನ್ನ ಕುಟುಂಬದವರೊಡನೆ ಉಂಟಾದ ಮನಸ್ತಾಪದಿಂದಾಗಿ ದಟ್ಟಾರಣ್ಯದ ನಡುವೆ ಒಂಟಿ ಮನೆ ಮಾಡಬೇಕಾಗಿ ಬರುತ್ತದೆ. ಸಂಪ್ರದಾಯದಂತೆ ಬೇಟೆಗೆ ಹೊರಡಬೇಕಾದಾಗ ರೂಪಸಿಯಾದ ಹೆಂಡತಿಯ ಪ್ರಾತಿವ್ರತ್ಯದ ಬಗ್ಗೆ ಆತರಕ ವ್ಯಕ್ತಪಡಿಸುತ್ತಾನೆ. ಸಂಕಮ್ಮನ ಬಂಜೆತನಕ್ಕೆ ತಾನೇ ಕಾರಣವಿರಬಹುದೆಂಬ ಒಳದನಿ ಅವನನ್ನು ಈ ಅನುಮಾನಕ್ಕೆ ತಳ್ಳುತ್ತದೆ ಫಲಾಪೇಕ್ಷೆಯ ತೀವ್ರ ಹಂಬಲದಲ್ಲಿರುವ ಸಂಕಮ್ಮ ಸಹಜವಾಗಿ ಯಾರಿಗಾದರೂ ತನ್ನ ಗೈರು ಹಾಜರಿಯಲ್ಲಿ ಒಲಿದು ಬಿಡಬಹುದೆಂಬ ಅನುಮಾನ

ಅವನಿಗೆ ಹೆಂಡತಿಯ ಮೇಲೆ ನಂಬಿಕೆ ಇದ್ದರೂ ಭಾಷೆಕೊಡುವಂತೆ ಕೇಳುತ್ತಾನೆ ಇದು ಪರಸ್ಪರ ಸ್ವಾಭಿಮಾನವನ್ನು ಕೆರಳಿಸುವ ಪ್ರಶ್ನೆಯಾಗುತ್ತದೆ. ಏನೂ ತಪ್ಪು ಮಾಡದೆ ಭಾಷೆ ಕೊಡುವ ಅಗತ್ಯವೇನು ಎಂಬುದು ಸಂಕಮ್ಮನ ತರ್ಕ.

ಪುರುಷ ಪ್ರಧಾನ ಸಮಾಜದ ಕಟ್ಟುಪಾಡಿನ ಮೌಲ್ಯಗಳನ್ನು ಸಂಕಮ್ಮ ತೀವ್ರವಾಗಿ ಪ್ರತಿಭಟಿಸುತ್ತಾಳೆ. ನೀಲಯ್ಯನ ಅನುಮಾನಕ್ಕೆ ರೋಸಿ ಹೋಗುವ ಅವಳು ನೀನು ಕೊಟ್ಟಿರುವ ತೆರ ಹಿಂತೆಗೆದುಕೊಂಡು ತನ್ನನ್ನು ಬಿಟ್ಟುಬಿಡು ಎನ್ನುವ ಹಂತಕ್ಕೂ ತಲುಪುತ್ತಾಳೆ. ಸ್ವಾತಂತ್ರ್ಯವಿಲ್ಲದ ಇಂಥ ಸಂಬಂಧವನ್ನು ಕಳೆದುಕೊಳ್ಳಲು ಸಿದ್ಧಳಿದ್ದಾಳೆ ಮದುವೆಯೆಂಬ ಒಪ್ಪಿತ ವ್ಯವಸ್ಥೆಯನ್ನು ಸ್ವೀಕರಿಸಿಯೂ ಅದಕ್ಕೆ ಅಷ್ಟೊಂದು ಮಹತ್ವ ಕೊಡದ ಬುಡಕಟ್ಟೊಂದರ ಪ್ರತಿನಿಧಿಯಾಗಿ ಸಂಕಮ್ಮ ಇಲ್ಲಿ ಕಾಣಿಸಿಕೊಳ್ಳುತ್ತಾಳೆ. ಸಂಕಮ್ಮ ದೃಷ್ಟಿಯಲ್ಲಿ ಮದುವೆಯೆಂಬುದು ಕೂಡಿ ಬಾಳುವ ಸಂಕೇತವೇ ಹೊರತು ಅಧಿಕಾರ ಸ್ಥಾಪಿಸುವ ಸಾಂಪ್ರದಾಯಿಕ ವಿಧಿ ಅಲ್ಲ. ಆದರೆ ಕ್ರಮೇಣವಾಗಿ ತನ್ನ ಯಜಮಾನ್ಯತೆಯನ್ನು ಭದ್ರಪಡಿಸಿಕೊಳ್ಳುವ ಮೂಲಕ ಏಕ ಸಾಮ್ಯತೆಯನ್ನು ಮೆರೆಯಲು ಹೊಂಚುಹಾಕುವ ಪುರುಷ ಪ್ರಧಾನ ಸಮಾಜದ ಪ್ರತಿನಿಧಿಯಾಗಿ ಇಲ್ಲಿ ನೀಲಯ್ಯನನ್ನು ಗುರುತಿಸಬೇಕಾಗುತ್ತದೆ. ಅವನಿಗೆ ಸಂಕಮ್ಮ ಕೇವಲ ಹೆಣ್ಣಾಗಿ ಅಥವಾ ಹೆಂಡತಿಯಾಗಿ ಮಾತ್ರ ಕಾಣುತ್ತಿಲ್ಲ ಅವಳು ನೀಲಯ್ಯನ ರಕ್ತವನ್ನು ಹಂಚಿಕೊಂಡು ಹುಟ್ಟಬೇಕಾದ ಮಕ್ಕಳಿಗೆ ತಾಯಿಯಾಗಬೇಕಾಗಿದೆ. ಇಲ್ಲಿ ಹೆಣ್ಣು ಮುಕ್ತತೆಗೆ ಹಾತೊರೆದರೆ ಗಂಡು ಕಟ್ಟುಪಾಡಿನ ಬೇಲಿಯನ್ನು ಭದ್ರಪಡಿಸತೊಡಗಿದೆ. ಹಾಗಾಗಿಯೇ ಇದು ಮುಕ್ತತೆ ಮತ್ತು ಪಾತಿವ್ರತ್ಯವೆಂಬ ಮೌಲ್ಯಗಳ ನಡುವಿನ ಸಂಘರ್ಷಕವಾಗಿ ಕಾಣಿಸಿಕೊಳ್ಳತೊಡಗಿದೆ.

ಬೇವಿನ ಹಟ್ಟಿ ಕಾಳಮ್ಮ ಅಥವಾ ಹೊನ್ನುಣಸೇ ಕಾಳಮ್ಮ ಎಂದು ಕರೆಯಲಾಗುವ ಕುರುಬರ ಒಡತಿಯ ಕಥೆ ಮಾದೇಶ್ವರ ಕಾವ್ಯದ ಇನ್ನೊಂದು ಬಹುಮುಖ್ಯ ಭಾಗ. ಇಲ್ಲಿ ಗಂಡಿನ ಪ್ರಾಮುಖ್ಯ ಏನೂ ಇಲ್ಲ ಎಂಬಷ್ಟು ಮಟ್ಟಿಗೆ ಮಾತೃಮೂಲ ಕುಟುಂಬದ ಲಕ್ಷಣಗಳು ಎದ್ದು ಕಾಣುತ್ತವೆ. ಮಂಟೇಸ್ವಾಮೀ ಕಾವ್ಯದಲ್ಲಿ ಬರುವ ಕಬ್ಬಿಣದ ಭಿಕ್ಷೆಯಂತೆ ಇಲ್ಲಿ ಎಳ್ಳಿನ ಭಿಕ್ಷೆ ಬಹಳ ಮುಖ್ಯವಾಗುತ್ತದೆ. ದೀಪದ ಎಣ್ಣೆಗೆ ಆಧಾರವಾದ ಎಳ್ಳು ಬೆಳೆಯುತ್ತಿರುವ ಕಾಳಮ್ಮನಿಗೆ ಎಲ್ಲಿಲ್ಲದ ಮಹತ್ವ ಬಂದಿದೆ. ಈ ಮಹತ್ವದ ಕಾರಣಕ್ಕಾಗಿಯೇ ಕಾಳಮ್ಮ ಹೆಚ್ಚಾಳತನದಲ್ಲಿ ಮೆರೆಯುತ್ತಿದ್ದಾಳೆ. ಮಾದೇಶ್ವರ ಅವಳಿಂದ ಎಳ್ಳು ಭಿಕ್ಷೆ ಪಡೆಯಬೇಕು ಆದರೆ ಕಾಳಮ್ಮ ಮಹಾ ಸ್ವಾಭಿಮಾನಿ ತನ್ನ ಸರ್ವಸ್ವವೇ ನಾಶವಾದರೂ ಎಳ್ಳಿನ ಭಿಕ್ಷೆ ಕೊಡುವವಳಲ್ಲ ಕಾಳಮ್ಮನಿಗೆ ತನ್ನ ಕುರಿಕಾಯುತ್ತಿರುವ ಗಂಡ ಹುಲಿಬಾಯಿಗೆ ಸಿಕ್ಕಿ ತುಂಡು ತುಂಡಾದರೂ ಅದು ಮುಖ್ಯವಲ್ಲ. ತನ್ನ ಬೆಳೆ ಹಾಗೂ ಅದರ ರಕ್ಷಣೆ ಮುಖ್ಯ ಭಿಕ್ಷೆ ನೀಡುದರಿಂದ ಅವಳ ಎಳ್ಳು-ಧಾನ್ಯ ಕಡಿಮೆಯಾಗುತ್ತದೆ ಎನ್ನುದಕ್ಕಿಂತ ಭಿಕ್ಷೆ ಕೊಡುವ ಮೂಲಕ ಮಾದಯ್ಯನ ಹೆಚ್ಚಾಳತನಕ್ಕೆ ಬಗ್ಗುವುದಿಲ್ಲ ಅಥವಾ ಶರಣಾಗುದಿಲ್ಲ ಎಂಬ ಹಠ ಇಲ್ಲಿ ಗಮನ ಸೆಳೆಯುತ್ತದೆ. ಈ ಹಠವನ್ನು ಕಾವ್ಯದಲ್ಲಿ ಜಿಪುಣತನ ಎಂದು ವರ್ಣಿಸಲಾಗಿದೆಯಾದರೂ ಅದು ಅವಳ ಸ್ವಾಭಿಮಾನವಾಗಿಯೇ ಮೆರೆಯುತ್ತದೆ. ಸಂಕಮ್ಮ ವಿಚಾರದಲ್ಲಿ ಕರುಣೆಯಾಗಿ ಕಾಣಿಸಿಕೊಂಡ ಮಾದೇಶ್ವರ ಇಲ್ಲಿ ನಿಷ್ಕರುಣಿಯಾಗುತ್ತಾನೆ ಯಾರೇ ಆದರು ತನಗೆ ಅಧೀನವಾಗುವುದು ಇಲ್ಲಿ ಮುಖ್ಯವಾಗುತ್ತದೆ. ಸಂಕಮ್ಮ ಹೆಣ್ಣಿಗೆ ಇರಬೇಕಾದ ಮುಕ್ತತೆಗಾಗಿ ಉಳಿವಿಗಾಗಿ ಹೋರಾಟ ಮಾಡಿ ಗೆಲ್ಲುತ್ತಾಳಾದರೆ ಕಾಳಮ್ಮ ಹೆಣ್ಣಿನ ಕೈಲಿ ಉಳಿಯಬೇಕದ ಒಡೆತನಕ್ಕಾಗಿ ಹೋರಾಡಿ ಸೋಲುತ್ತಾಳೆ.

ಹೀಗೆ ಕಾಲಚಕ್ರದ ನಿರಂತರತೆಯಲ್ಲಿ ಬದಲಾವಣೆಗಳು ಸಮಾಜದಲ್ಲಿ ಸಾಗುತ್ತಾ ಬಂದಿದೆ ಪ್ರಾಚೀನತೆಯಿಂದ ಆಧುನೀಕತೆಯವರೆಗೆ ಮನುಷ್ಯನ ಬದುಕು ಆವಿಷ್ಕಾರಗಳ ಜೊತೆಗೆ ಸಾಗಿದೆ. ಪ್ರಾಚೀನ ಕಾಲದಿಂದಲೂ ಮಹಿಳೆ ತನ್ನ ಪ್ರಾತಿನಿಧೀಕರಣವನ್ನು ಸಾಧಿಸುತ್ತಾ ಬಂದಿದ್ದರೂ ಆಧುನಿಕ ಮಹಿಳೆ ಗಂಡಿನಷ್ಟೇ ಸಮಾನತೆ ಸ್ವಾತಂತ್ರ್ಯ ಗಳಿಸಿದಳೆ ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಲೇ ಇದ್ದೇವೆ...

ಗ್ರಂಥ ಋಣ ;


1. ಮಲೆಯ ಮಾದೇಶ್ವರ (ಸಂಪಾದಿತ ಕೃತಿ)
   ಸಂ.ಡಾ.ಬಿ.ಎಚ್. ಸ್ವಾಮಿ
   ಪ್ರಕಾಶಕರು ; ದಾಮಿನಿ ಸಾಹಿತ್ಯ
   ಬೆಂಗಳೂರು 2001
2. ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ
   ಸಂಪಾದಕರು ಡಾ.ಪಿ.ಕೆ. ರಾಜಶೇಖರ
   ಪುಸ್ತಕ ಪ್ರಕಾಶನ ದಾವಣಗೆರೆ 2003